**ದಿನಾಂಕ : 05.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ವಾದಿಯರ ಪರವಾಗಿ ಶ್ರೀ ಆರ್.ಡಿ.ಆರ್. ವಕೀಲರಿಂದಃ-**

ನಾನು ಬಿ.ಎ. ಪದವಿ ಮುಗಿಸಿದ್ದೇನೆ. ಶಾಲಾ ಕಟ್ಟಡ ಮತ್ತು ಆಸ್ತಿಗೆ ಸಂಬಂಧಪಟ್ಟಂತೆ ವಾದಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಶಾಲಾ ಕಟ್ಟಡದ ಆಸ್ತಿಯ ಸಂಖ್ಯೆ ಎಷ್ಟು ಎಂದರೆ ಸಾಕ್ಷಿ ಆಸ್ತಿಯ ಸಂಖ್ಯೆ ಗೊತ್ತಿಲ್ಲ, ಅದರ ಸರ್ವೆ ನಂಬರ್ 43/2 ಮತ್ತು 43/1 ಇರುತ್ತದೆ ಎಂದು ನುಡಿಯುತ್ತಾರೆ. ಶಾಲಾ ಕಟ್ಟಡ ಪೂರ್ವ ಪಶ್ಚಿಮ ಮತ್ತು ಉತ್ತರ ದಕ್ಷಿಣ ಅಳತೆ ಎಷ್ಟು ಇದೆ ಎಂದರೆ ಸಾಕ್ಷಿ ಉದ್ದಳತೆ ಹೇಳಲು ಬರುವುದಿಲ್ಲ, ಆದರೆ ಒಟ್ಟು ವಿಸ್ತೀರ್ಣ 18 ಚದರ ಅಡಿ ಇರುತ್ತದೆ ಎಂದು ನುಡಿಯುತ್ತಾರೆ. ಸ.ನಂ.43/2 ಮತ್ತು 43/1 ಸೇರಿ ಒಟ್ಟು 2 ಎಕರೆ ಆಸ್ತಿ ಇದೆ. ನನ್ನ ಮದುವೆ 1983ನೇ ಇಸವಿಯಲ್ಲಿ ಆಗಿರುತ್ತದೆ. ನನ್ನ ಮದುವೆಗಿಂತ ಮೊದಲು ಶುಂಭುಲಿಂಗಪ್ಪರವರ ಕುಟುಂಬದಲ್ಲಿ ಏನೇನು ವ್ಯವಹಾರಗಳಾಗಿದ್ದವು ಎಂದು ನಿಮಗೆ ಗೊತ್ತಾ ಎಂದರೆ ಸಾಕ್ಷಿ ಅಂತಹ ಹೇಳಿಕೊಳ್ಳುವಂತಹ ಯಾವುದೇ ವ್ಯವಹಾರಗಳು ಆಗಿರಲಿಲ್ಲ ಎಂದು ನುಡಿಯುತ್ತಾರೆ.

1996 ರಲ್ಲಿ ನೀವು ಮತ್ತು ನಿಮ್ಮ ಕುಟುಂಬದವರು ಎಲ್ಲಿ ವಾಸವಾಗಿದ್ದೀರಿ ಎಂದರೆ ಸಾಕ್ಷಿ ಬೆಂಗಳೂರಿನಲ್ಲಿ ವಾಸವಾಗಿದ್ದೆವು ಎಂದು ನುಡಿಯುತ್ತಾರೆ. 1989 ರಿಂದ 2005 ರವರೆಗೆ ನಾವು ಬೆಂಗಳೂರಿನಲ್ಲಿ ವಾಸವಾಗಿದ್ದೆವು.

ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.